Sri K. V. SHANKARA GOWDA.—I do not think that this supplementary arises out of this question.

Mr. SPEAKER.—I am not acquainted with the names of all the members. If I commit a mistake, the same may be excused for some time. I will try to acquaint myself with the names of all the Members.

ಶ್ರೀ ಎನ್. ಎ. ಜನ್ನೇಗೌಡ.—ಉಪಾಧ್ಯಾಯರುಗಳಿಗೆ ತೊಂದರೆಯಾಗಿದೆ ಎಂದು ಹೇಳಿ ತಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಮ್ಯಾನೇಜ್‌ಮೆಂಟಿನವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಕಾರಣಗಳು ಇರುತ್ತವೆ. ಆದ್ದರಿಂದ ಇದಕ್ಕೆರ್ಸಾ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಎ. ಜನ್ನೇಗೌಡ.—ಈ ರೀತಿ ಡಿಲೇ ಆಗುವುದಕ್ಕೆ ಕಾರಣ, ಕೆಲವು ಅಡಳಿತ ವರ್ಗದವರು ಬೇಕು ಬೇಕಂತ ಉದ್ದೇಶಪೂರ್ವಕವಾಗಿಯೇ ಮಾಡುತ್ತಿರುವುದು ನಿಜವಲ್ಲವೇ ?

ಶ್ರೀ ಕೆ. ವಿ. ಶಂಕರಗೌಡ.—ಉದ್ದೇಶ ಇದೆ ಅಂತ ಹೇಳುವುದಕ್ಕಾಗುವುದಿಲ್ಲ. It cannot be said so because they have subsequently submitted the return.

ಶ್ರೀ ಸಿದ್ದಯ್ಯ ಕಾಶೀಮಠ್.—ಪ್ರಾಥಮಿಕ ಉಪಾಧ್ಯಾಯರುಗಳಿಗೆ ಪ್ರತಿತಿಂಗಳ ಪಗಾರ ಸರಿಯಾಗಿ ಕೊಡುವಿದ್ದರೆ ಕಷ್ಟವಾಗುತ್ತದೆ. ಆದ್ದರಿಂದ ಪ್ರತಿ ತಿಂಗಳೂ ಅವರಿಗೆ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

Sri K. V. SHANKARA GOWDA.—That is a different question altogether.

Taking over of Hospital at Moolky

48. Sri K. RATNAKUMAR SHETTY (Mudabidri).—

Will the Minister for Health be pleased to state :—

the decision taken by the Government regarding taking over of the hospital at Moolky by the Government as proposed by the M.L.A. of Moodabidri and Moolky Town Panchayat ?

A.—Sri G. BASAVANNAPPA (Deputy Minister for Health).—

It has been decided not to take over the hospital at Moolky.

ಶ್ರೀ ಕೆ. ರತ್ನಕುಮಾರ್ ಶೆಟ್ಟಿ.—ಮುಲ್ಕಿಯಲ್ಲಿ ತಾವು ಆಸ್ಪತ್ರೆ ಕಟ್ಟಿಸಿಕೊಡುವುದು ಬೇಡ, ಅಲ್ಲಿ 15 ವರ್ಷದಿಂದ ಆಸ್ಪತ್ರೆ ಇದೆ, ರೋಗಿಗಳು ಬರುತ್ತಾರೆ, ಡಾಕ್ಟರು ಇದ್ದಾರೆ. ಈಗ ಅಲ್ಲಿ ತಾಲ್ಲೂಕುಬೋರ್ಡಿನ ಆಸ್ಪತ್ರೆಯನ್ನು ನಡೆಸಲಿಕ್ಕೆ ಸಾಧ್ಯವಿಲ್ಲ, ಅದನ್ನು ಸರ್ಕಾರದವರು ತೆಗೆದುಕೊಳ್ಳಿ ಬೇಕೆಂದು ಹೇಳಿ 5–6 ವರ್ಷಗಳಿಂದ ಹೇಳಿದರೂ ಇನ್ನೂ ಕೂಡ ತೆಗೆದುಕೊಂಡಿಲ್ಲ ; ಕಡೆಗಾಣಿಸಿದ್ದೀರಿ. ಇದು ಯಾವ ಕಾರಣದಿಂದ ? ಹಣದ ಕೊರತೆಯಿಂದಲೋ ಅಥವಾ ನಮ್ಮ ಮೇಲೆ ವೈಷಮ್ಯ ಇದ್ದು ಯಾವುದು ಕೇಳಿದರೂ ಕೊಡಕೂಡದು ಎಂಬ ಭಾವನೆಯನ್ನು ಸರ್ಕಾರ ತಾಳಿದಿಯೋ ? ಒಂದುವೇಳೆ ಅಂತ ಭಾವನೆಯನ್ನು ತಾಳಿದ್ದರೆ ನಮ್ಮ ಮೂಡಬಿದ್ರೆ ಪ್ರಾಂತ್ಯವನ್ನು ಮೈಸೂರಿನಿಂದ ಬೇರೆ ಇಡಬೇಕೆಂದು ಅಪೇಕ್ಷೆ ಪಡುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಇಲ್ಲ, ಅಂತಹ ಆಸ್ಪತ್ರೆಗಳನ್ನು ವಿಲೇಜ್ ಪಂಚಾಯ್ತಿ ಮತ್ತು ತಾಲ್ಲೂಕುಬೋರ್ಡ್ ಆಕ್ಟ್ ಸೆಕ್ಷನ್ 103ನೇ ಪ್ರಕಾರ ತಾಲ್ಲೂಕು ಬೋರ್ಡಿನವರೇ ನಡೆಸಬೇಕು, ಅದು ಅವರ ಒಬ್ಲಿಗೇಟರಿ ಕೆಲಸವಾಗಿದೆ. ಆದ್ದರಿಂದ ತಾಲ್ಲೂಕು ಬೋರ್ಡಿನವರು ನಡೆಸುತ್ತಾ ಇದ್ದು ಅದರಲ್ಲಿ ಏನಾದರೂ ನ್ಯೂನತೆ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ, ಅದರ ಬಗೆ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಈಗಾಗಲೇ ರಾಜ್ಯದಲ್ಲಿ ಕೆಲವು ತಾಲ್ಲೂಕುಗಳಲ್ಲಿ ಆಸ್ಪತ್ರೆಗಳನ್ನು ಸರ್ಕಾರದವರೇ ನಡೆಸಿಕೊಂಡು ಬರುತ್ತಾ ಇದ್ದೀರಿ. ಕೆಲವು ತಾಲ್ಲೂಕುಗಳಲ್ಲಿ ಡೆವಲಪ್‌ಮೆಂಟ್ ಬೋರ್ಡು ಮತ್ತು ತಾಲ್ಲೂಕು ಬೋರ್ಡಿನವರಿಗೆ ಕೊಟ್ಟಿದ್ದೀರಿ. ತಾಲ್ಲೂಕು ಬೋರ್ಡಿನವರಿಗೆ ತಮ್ಮ ಉಳಿದ ಅಭಿವೃದ್ಧಿಕಾರ್ಯಗಳನ್ನು ಮಾಡುವುದರ ಜೊತೆಗೆ ಆಸ್ಪತ್ರೆಗಳನ್ನೂ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಆದಕಾರಣ ಸರ್ಕಾರದವರು ಯೂನಿಫಾರಂ ಆಗಿ ಎಲ್ಲಾ ತಾಲ್ಲೂಕು ಹಾಸ್ಪಿಟಲ್‌ಗಳನ್ನೂ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆಯೇ ಹೇಗೆ?

ಶ್ರೀ ಜಿ. ಬಸವಣ್ಣಪ್ಪ.—ಅವರಿಗೆ ಕೊಡುತ್ತಾ ಇದ್ದ ರೆವಿನ್ಯೂ 20 ಪರ್ಸೆಂಟ್‌ನ್ನು 10 ಪರ್ಸೆಂಟ್‌ಗೆ ಹೆಚ್ಚು ಮಾಡಲಾಗಿದೆ, ಆದ್ದರಿಂದ ಇನ್ನು ಮುಂದೆ ಸರಿಯಾಗಿ ನಡೆಯುತ್ತದೆ ಎಂದು ಹೇಳಬಹುದು.

ಶ್ರೀ ಬಿ. ಎಂ. ಇದಿನಬ್ಬ.—ಮಂಗಳೂರು ತಾಲ್ಲೂಕು ಬೋರ್ಡ್ ಹಾಸ್ಪಿಟಲ್‌ನ್ನು ತಾಲ್ಲೂಕು ಬೋರ್ಡಿನಿಂದ ಸರ್ಕಾರದವರೇ ತೆಗೆದುಕೊಳ್ಳಬೇಕೆಂದು ಠರಾವುಮಾಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಬಸವಣ್ಣಪ್ಪ.—ಬಂದಿದೆ. ಆದರೆ ಮುನಿಸಿಪಾಲಟಿಗಳವರು ಮತ್ತು ಸ್ಥಾನಿಕರು ಬಹಳ ಹೆಚ್ಚಿನ ನಿಗಾ ವಹಿಸಿದ್ದರೆ ಅಲ್ಲಿಯ ಆಸ್ಪತ್ರೆ ಸರಿಯಾಗಿ ಕೆಲಸಮಾಡುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ತಾಲ್ಲೂಕು ಅಭಿವೃದ್ಧಿಮಂಡಲಿಯಿಂದ ಆಸ್ಪತ್ರೆಯನ್ನು ನಡೆಸುವುದಕ್ಕೆ ಆಗದೇ ಹೋದ ಪಕ್ಷದಲ್ಲಿ ಆಸ್ಪತ್ರೆ ನಡೆಸುವುದು, ಅಲ್ಲಿನ ಆರೋಗ್ಯ ಮತ್ತು ನೈರ್ಮಲ್ಯವನ್ನು ಕಾಪಾಡುವುದು ಸರ್ಕಾರದ ಒಂದು ಕಡ್ಡಾಯವಾದ ಕರ್ತವ್ಯವಲ್ಲವೇ?

ಶ್ರೀ ಜಿ. ಬಸವಣ್ಣಪ್ಪ.—ಹೌದು, ಆದ್ದರಿಂದಲೇ ಅದಕ್ಕೆ ಸರ್ಕಾರದ ಪರವಾಗಿ ಗ್ರಾಂಟನ್ನು ಕೊಡಬೇಕು, ಅದನ್ನು ಕೊಡಲಾಗುತ್ತಿದೆ.

Sri H. SIDDAVEERAPPA.—The question is of a local nature.

Mr. SPEAKER.—Hon'ble Member Sri Siddaveerappa was quite right in bringing to my notice that the question is of a local nature. I think, the correct policy in questions of local nature is to allow only one or two supplementaries by members of that area, because other Members may not have the necessary knowledge about it. It may kindly be remembered that while putting supplementaries, arguments should not be put forth and motives should not be attributed. Questions should be put in a befitting manner.

Sri P. V. AITHALA.—The members coming from a particular area about which this question pertains, should be given an opportunity.

Mr. SPEAKER.—The member may put a direct question.

ಶ್ರೀ ಪಿ. ವಿ. ಐತಾಳ್.—ತಾಲ್ಲೂಕು ಬೋರ್ಡಿನಲ್ಲಿ ಹಣವಿಲ್ಲವಾದ್ದರಿಂದ ಆರೋಗ್ಯ ಇಲಾಖೆಯವರೇ ಆಸ್ಪತ್ರೆಯ ಕೆಲಸವನ್ನು ವಹಿಸಿಕೊಳ್ಳುವ ವಿಚಾರವನ್ನು ಪುನರ್ವಿಮರ್ಶೆ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ತಾಲ್ಲೂಕು ಮಟ್ಟದಲ್ಲಿರುವುದನ್ನು ತಾಲ್ಲೂಕು ಬೋರ್ಡಿನವರೇ ವಹಿಸಿಕೊಳ್ಳಬೇಕು, ಅದುದರಿಂದ ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

(*Sri M. H. Jayaprakasha Narayan rose to put a question*).

Mr. SPEAKER.—Is the hon'ble member concerned with that?

Sri M. H. JAYAPRAKASH NARAYAN.—Whether I am concerned or not, it is a policy matter. Am I not entitled to put a question on a policy matter?

Mr. SPEAKER.—Regarding the policy matter, it is all right. I do not want to abridge the privileges of the members.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಸ್ಥಳೀಯ ಸಂಸ್ಥೆಗಳು ಹಣದ ಕೊರತೆಯಿಂದ ಅನ್ಪತ್ತೆಯನ್ನು ನಡೆಸುವುದಕ್ಕಾಗುವುದಿಲ್ಲ ಎಂದು ಹೇಳುವಾಗ ಸರಕಾರದವರೇ ಅಲ್ಲಿ ಆ ಕೆಲಸವನ್ನು ವಹಿಸಿಕೊಂಡು ವೈದ್ಯಕೀಯ ಸೌಕರ್ಯವನ್ನು ಒದಗಿಸುವ ವಿಚಾರದಲ್ಲಿ ಸರಕಾರದ ನೀತಿಯೇನು ?

Sri G. BASAVANNAPPA.—As it is a policy matter, I want notice.

Nationallised Bus Routes

49. Sri M. MALLAPPA (Birur).—

Will the Minister for Transport be pleased to state :—

(*a*) the number of bus routes nationalised so far in the State ;

(*b*) the number of Bus Routes monopolised by private Bus Operators in the State ;

(*c*) the total mileage of Bus routes intended for nationalisation in the State ;

(*d*) the amount of expenditure incurred for the nationalisation of Bus routes ;

(*e*) the net percentage of return over the investment envisaged due to nationalisation of Bus routes in the State ?

A.—Sri MOHAMED ALI. (Minister for Transport).—

(*a*)

1.	Anekal Scheme	...	14 Routes
2.	Hassan Scheme	...	98 ,,
3.	Mysore Scheme	...	64 ,,
4.	Bellary Scheme	...	86 ,,
5.	Kanakapura Scheme	...	29 ,,
6.	Hubli Scheme	...	170 ,,
7.	Bijapur Scheme	...	173 ,,
8.	Belgaum Scheme	...	175 ,,
9.	Gulbarga Scheme	...	71 ,,
10.	Bangalore Scheme	...	94 ,,
11.	Hubli City Services	...	Entire City Area.
12.	Bangalore Transport Services		Entire City and some surrounding areas.
13.	Gulbarga Sedam Scheme	...	1 route
14.	Mangalore Scheme	...	31 routes
15.	Shimoga Scheme	...	48 routes

(*b*) Nil.

(*c*) 60,000 miles approximately.

(*d*) Rs. 21.60 crores so far.